ವಾಗಿ ವ್ಯವಹರಿಸುವ ಮನಸ್ಸನ್ನು ಕೂಡ ಪರಪುಟ್ಟನೆನ್ನುತ್ತಾರೆ, ಈ ಹಾಡಿನಲ್ಲಿ:

**ಕೋಗಿಲೆ, ಚೆಲ್ವ ಕೋಗಿಲೆ ಮುದ್ದು**
**ಕೋಗಿಲೆ, ಜಾಣ ಕೋಗಿಲೆ ॥ ಪ ॥**

"ನಿನ್ನ ನಿಜರೂಪದಂತೆ ನೀನು ಯಾವಾಗಲೂ ಶಿವಭಾವವನ್ನು ಹೊಂದಿರು" ಎಂದು ಮನಸ್ಸನ್ನು ಮುದ್ದಾಗಿ ಕರೆದು ಎಚ್ಚರಿಸಿ ಮುನ್ನಡೆಸುತ್ತಾರೆ. ಹೀಗೆ ಮನಸ್ಸನ್ನು ಜಾಗೃತಗೊಳಿಸುತ್ತ ಮುನ್ನಡೆದಾಗ ಜೀವಸಂಬೋಧನೆಯ ಸ್ಥಲಕ್ಕೆ ಸಾಧಕನ ಪ್ರವೇಶ.

**ಜೀವಸಂಬೋಧನೆ ಸ್ಥಲ:** ತನ್ನ ಹಂಬಲದ ಮೊರೆಯಿಂದ ಶಿವನ ಕೃಪೆಯನ್ನು ಗಳಿಸುವ ಹಾದಿಯಲ್ಲಿ ನಡೆಯುವ ಸಾಧಕಜೀವಿಯು ಲೌಕಿಕ ಭಾವನೆಗಳಾದ ಆಸೆ ಆಮಿಷ ರಾಗ ದ್ವೇಷ ಮುಂತಾದವುಗಳಿಂದ ವಿಮುಕ್ತನಾಗಬೇಕು. ಶಾಶ್ವತ ಸುಖ ಪಡೆಯುವ ಅಭೀಪ್ಸೆಯುಳ್ಳವರಿಗೆ, 'ಪ್ರಾಪಂಚಿಕ ಸುಖಗಳ' ಆಸಕ್ತಿ ಕಡಿಮೆಯಾಗಬೇಕು. ನಶ್ವರವಾದ ಭೌತಿಕ ಸುಖದ ಮೌಲ್ಯದ ಪರಿಮಿತಿಯನ್ನು ಮನಗಂಡು, ಅದರ ಬಗ್ಗೆ ಜುಗುಪ್ಸೆ ಮೂಡಬೇಕು. ಹಾಗಾದಾಗ ಪರಮಾತ್ಮನಲ್ಲಿ ಸಮರಸ ಹೊಂದುವ ಶಾಶ್ವತ ಸುಖದ ಬೆಲೆಯ ಅರಿವಾಗುತ್ತದೆ. ಇಂತಹ ಅರಿವು ಮೂಡಲು ಸಾಧಕ ಮೊದಲು ತನ್ನ ಆತ್ಮನಿರೀಕ್ಷಣೆ ಮಾಡಿಕೊಳ್ಳಬೇಕು, ವಿಚಾರಗಳನ್ನು ಮಂಥನ ಮಾಡಬೇಕು, ತಾನು ನಡೆಯುತ್ತಿರುವ ಮಾರ್ಗ ಸರಿಯೇ ತಪ್ಪೇ ಎಂಬುದನ್ನು ವಿಶ್ಲೇಷಿಸಿಕೊಂಡು ಜೀವನದ ಕಷ್ಟ ನಷ್ಟಗಳನ್ನು ಗುರುತಿಸಿ, ಮುಂದೆ ತಾನು ನಡೆಯಬೇಕಾದ ಮಾರ್ಗವನ್ನು ಕಂಡುಕೊಳ್ಳಬೇಕು.

**ಸುಮ್ಮನೆ ಕಾಲವನು ಕಳೆದು ಸಾವುದುಚಿತವೆ**
**ನೆಮ್ಮಿ ನಿಜವನು ಮುಕ್ತಿ ಪಡೆಯದೆ ಮನುಜ**

ಎಂದು ನಿಜಗುಣರು ಕೇಳಿರುವುದು ಬಹಳ ಅರ್ಥಪೂರ್ಣವಾಗಿದೆ. ಮನುಷ್ಯ ಜನ್ಮದಲ್ಲಿ ಹುಟ್ಟಿ ಬಂದಿರುವುದು ವ್ಯರ್ಥವಾದ ಕ್ಷುಲ್ಲಕ ಸುಖಗಳಲ್ಲಿ ಕಾಲ ಕಳೆದು ಹೋಗುವುದಕ್ಕಾಗಿ ಅಲ್ಲ. ಹುಟ್ಟಿದ ಮೇಲೆ ಭವಗೆಟ್ಟು ಪಾರಾಗುವ ಪ್ರಯತ್ನವಿರಬೇಕು. ಹುಟ್ಟಿದ ಮೇಲೆ ಅನುಭವಿಸಲೇಬೇಕಾದ ಘೋರ ಸಂಕಟಗಳ, ತಾಪತ್ರಯದ ಬಗ್ಗೆ ಅರಿವಿರಬೇಕು. ಅದೇ ಪದ್ಯ ಮುಂದುವರೆದು ಹೀಗೆ ಹೇಳುತ್ತದೆ: **'ಜೀವದ ಬಸುರೊಳು ಬಂದು, ಜನನ ಮರಣ, ರುಜೆ ಭಯ ಶೋಕ ಜರೆ ಬಡತನ ಪರಸೇವೆ ಯಾಚನೆ ಹಾನಿ ಹಳಿವು'** – ಈ ಎಲ್ಲವನ್ನೂ ಅನುಭವಿಸಿ ಜೀವ ತತ್ತರಿಸಿಹೋಗುತ್ತದೆ. ಇಂತಹ ಅನೇಕ ಸಂಕಟಗಳ ಪರಿಭಾವನೆಯಿಂದ ತಲ್ಲಣಗೊಂಡ ಜೀವಕ್ಕೆ ನಿದ್ರೆಬಾರದು. ಇವನ್ನೆಲ್ಲ ಯಾವಾಗ ಮೀರಿ ನಿಂತೇನು ಎಂಬ ಚಿಂತೆ ಸದಾ ಕಾಡತೊಡಗುತ್ತದೆ; ಮನವನ್ನು ಮುಕ್ತಿಯ ಹಂಬಲದೆಡೆಗೆ ತಿರುಗಿಸುವಂತೆ ಪ್ರೇರೇಪಿಸುತ್ತದೆ. **"ಪಡೆವೆ ನೀನೆಂದಿಗೆ ಪರಮುಕ್ತಿಯ ಸುಖವನು, ಕೆಡುವ ಕಾಯದ ಮೋಹವನು ಮಾಣೆ ಮನುಜ"** ಎಂಬ ವಿಚಾರ ಹುಟ್ಟತೊಡಗುತ್ತದೆ.

**ಬೇಡ ಬೇಡ ಭೋಗದೊಡನಾಟ**
**ನೋಡು ನಂಜುವೆರಸಿದ ಸವಿಯೂಟ**
**ಕೇಡು ಕಡೆಯೊಳಿಹದದು ಮಾಯೆಯ ಕೈಮಾಟ**

ಎಂದು ಎಚ್ಚರಿಸಿ ಹೇಳುವ ಮಾತುಗಳು ವಿಷಯಸುಖದತ್ತ ಹರಿಯುವ ಮನಸ್ಸಿನ ಮೇಲೆ ತೀವ್ರವಾದ ಪರಿಣಾಮವನ್ನು ಬೀರುವಂತಿವೆ.

**ಆಡುತೈದಳೆ ಮಾಯೆಯೆಂಬ ಕಾಮಿನಿ ಬಿಡದೆ**
**ನೋಡಿ ಬಲ್ಲವರು ಸಂಸಾರ ನಾಟಕವ**

ಮಾಯೆಯ ಆಟ ತುಂಬಾ ನಶ್ವರವಾದುದು. ಬಲ್ಲವರಾದರೆ ದೂರ ನಿಂತು ಈ ಕಾಮಿನಿ ಆಡುವ, ಆಡಿಸುವ ಸಂಸಾರ ನಾಟಕವನ್ನು ನೋಡಬಹುದು. ಆದರೆ ಕ್ಷಣಭಂಗುರವಾದ, ಆಕರ್ಷಣೆಯ ಮಾಯೆಯ ಮುಸುಕಿನ ಬಗ್ಗೆ ಅರಿವಿಲ್ಲದೆ, ಇಡೀ ಜಗತ್ತೇ ಆಕೆಯ ತುಳಿತಕ್ಕೆ ಸಿಕ್ಕಿದೆ. ನೀತಿ ನಿಯಮಗಳ ಕಟ್ಟಿನಲ್ಲಿದ್ದು ಚಿತ್ತಶುದ್ಧಿ ಸಾಧಿಸಿಕೊಂಡು ವೈರಾಗ್ಯದತ್ತ ಒಲವನ್ನು ಗಳಿಸಿಕೊಂಡವರಿಗೆ ಮಾತ್ರ ಸತ್ಯ ಚಿತ್ರಣದ ಅರಿವಾಗುತ್ತದೆ.


ನಿತ್ಯಸತ್ಯನಾದ ಪರಮಾತ್ಮ ಸದಾ ಪ್ರಕಾಶಿಸುತ್ತಾನೆ. ಹಾಗೆಯೇ ಕ್ಷಣದಲ್ಲಿ ಕರಗಿ ಹೋಗುವ ಮೋಡದಂತೆ ಆಸೆ ಆಮಿಷದ ನಶ್ವರ ಮೋಹ ಮಮಕಾರಗಳ ಮಾಯೆಯು ನಮ್ಮನ್ನು ಕವಿದು ಶಾಶ್ವತ ಸತ್ಯದ ಬೆಳಗನ್ನು ಮುಚ್ಚಿ ಮರೆಯಾಗಿಸುತ್ತದೆ. ಆದ್ದರಿಂದ ನಶ್ವರವಾದ ಮಾಯೆಗೊಳಗಾಗದೆ ಶಾಶ್ವತ ಸತ್ಯವನ್ನು ಅರಿಯಬೇಕೆಂಬ ಎಚ್ಚರ ಸಾಧಕನಲ್ಲಿರಬೇಕು. ಇದನ್ನೇ ನಿಜಗುಣರು ಜೀವಸಂಬೋಧನೆ ಸ್ಥಲದಲ್ಲಿ ಹಲವಾರು ಅರ್ಥಪೂರ್ಣ ಗೀತೆಗಳ ಮೂಲಕ ಸ್ಪಷ್ಟಪಡಿಸಿದ್ದಾರೆ. (ಮುಂದುವರಿಯುವುದು)

## ವಿವೇಕಾನಂದ ಕವಿತಾಂಜಲಿ
## ಶ್ರೀ ವಿವೇಕಾನಂದ ಸಂಭೂತಿ

ಇದ್ದನು ಸಮಾಧಿನಿರ್ವಿಕಲ್ಪಂ ನರಮಹರ್ಷಿ :
ಅಲ್ಲಿ ಶಶಿಸೂರ್ಯರಿಗೆ ಹಗಲಿಲ್ಲ; ತಾರಾಕೋಟಿ
ದೂರದೊಳೆ ನಿಂತಿಹವು, ಹೋಗಲಾರದೆ ದಾಟಿ,
ಕಾಲ್ಸೋತು ! – ಆ ದಕ್ಷಿಣೇಶ್ವರ ಸುದೂರದರ್ಶಿ
ತಾಂ ಧ್ಯಾನಪಥದಿಂದೇರಿ, ಭವಲೋಕಮಂ ಮೀರಿ,
ಪಂತಿಕ್ಕೆ ಪಂಕ್ತಿಪಂಕ್ತಿಯ ಚಿನ್ಮಯ ಶರೀರರಂ
ದೇವರ್ಕಳಂ, ಬಳಿಸಾರ್ದನಾ ಮಹಾಮುನಿ ನರಂ
ಭಾವಲೋಕಾತೀತದೊಳ್ ನಿರ್ಗುಣದೊಳಾರಿ
ನಿರ್ವಿಕಲ್ಪ ಸಮಾಧಿಯೋಗದಿಂದಿರ್ದೆಡೆಗೆ !...
ಶಿಶುರೂಪಮಂ ತಾಳುತಾ ಘನೀಭೂತ ಜ್ಯೋತಿ
ಏರಿದುದು ಸುಮಕೋಮಲಂ ಸಿದ್ಧವಜ್ರನ ತೊಡೆಗೆ...
ಋಷಿಯ ಕೊರಳಂ ತನ್ನ ನಳಿದೋಳ್ಗಳಿಂದಪ್ಪಿ
"ಇಳಿದು ಬಾ ನನ್ನೊಡನೆ !"– ಆ ಕರೆಗುಣ್ಮಿದಾ ಪ್ರೀತಿ
ಧರೆಗವತರಿಸಿತ್ತೈ ಈ ನರೇಂದ್ರ ರೂಪಿಂದೊಪ್ಪಿ !

– ಶ್ರೀ ಕುವೆಂಪು

ಸ್ವಾಮಿ ವಿವೇಕಾನಂದರು ಅಮೆರಿಕೆಯ ಹಲವಾರು ಜನರ ಮೇಲೆ ಅಗಾಧ ಪ್ರಭಾವವನ್ನು ಉಂಟು ಮಾಡಿದರು. ಅವರ ಜೀವನಗತಿಯನ್ನೇ ಪರಿವರ್ತಿಸಿ, ಅಧ್ಯಾತ್ಮದ ಆನಂದದಿಂದ ಅವರ ಜೀವನವು ಸಾರ್ಥಕವಾಗುವಂತೆ ಮಾಡಿದರು. ಅಂತಹ ಒಬ್ಬರು ಪುಣ್ಯಜೀವಿಯ ಆತ್ಮೀಯ ಕಥನವನ್ನು ನಾವಿಲ್ಲಿ ನೋಡುತ್ತೇವೆ. ಇದರ ಲೇಖಕಿಯಾದ ಪ್ರವ್ರಾಜಿಕಾ ಬ್ರಹ್ಮಪ್ರಾಣಾ ಅವರು ಅಮೆರಿಕದ ಹಾಲಿವುಡ್‌ನಲ್ಲಿರುವ ವೇದಾಂತ ಸೊಸೈಟಿ ಆಫ್ ಸದರನ್ ಕ್ಯಾಲಿಫೋರ್ನಿಯಾಕ್ಕೆ ಸೇರಿದ, ಸಾಂತಾ ಬಾರ್ಬರಾ ಎಂಬ ಸ್ಥಳದಲ್ಲಿರುವ, ಶಾರದಾ ಕಾನ್ವೆಂಟಿನ ನಿವಾಸಿಯಾಗಿರುವ ಹಿರಿಯ ಸಂನ್ಯಾಸಿನಿ. ಇವರು ಹಲವಾರು ಪುಸ್ತಕಗಳನ್ನು ಸಂಪಾದಿಸಿದ್ದಾರೆ ಮತ್ತು ರಚಿಸಿದ್ದಾರೆ. ಇವರ ವಿದ್ವತ್ಪೂರ್ಣ ಲೇಖನಗಳು ಹಲವಾರು ಇಂಗ್ಲಿಷ್ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ‘ಪ್ರಬುದ್ಧಭಾರತ’ ಪತ್ರಿಕೆಯಲ್ಲಿ ಮೂಡಿಬಂದ ಈ ಇಂಗ್ಲಿಷ್ ಲೇಖನದ ಸುಲಲಿತ ಕನ್ನಡ ಅನುವಾದವನ್ನು ಮಾಡಿಕೊಟ್ಟಿರುವವರು ಮಾತಾ ತ್ಯಾಗಮಯೀ ಅವರು.



# ಭಗವಂತನನ್ನು ಸ್ಪರ್ಶಿಸಿದ ಸೋದರಿ ಲಲಿತಾ

ಪ್ರವ್ರಾಜಿಕಾ ಬ್ರಹ್ಮಪ್ರಾಣಾ

೧೯೭೦ರಲ್ಲಿ ಸಾಂತಾ ಬಾರ್ಬರಾದಲ್ಲಿ ಶಾರದಾ ಕಾನ್ವೆಂಟಿನ ಯುವ ಸಂನ್ಯಾಸಿನಿಯಾಗಿ ನಾನು ಸೋದರಿ ಲಲಿತಾರ ಕುರಿತಾಗಿ ಬಹಳಷ್ಟು ಕಥೆಗಳನ್ನು, ಸ್ವಾಮಿ ಪ್ರಭವಾನಂದಜಿ ಹಾಗೂ ಅವರೊಂದಿಗೆ ಇದ್ದ ಹಿರಿಯ ಸಂನ್ಯಾಸಿನಿಯರಿಂದ ಕೇಳಿದ್ದೆ. ಆ ಕಥೆಗಳು ನನ್ನನ್ನು ಸ್ಫೂರ್ತಿಗೊಳಿಸಿದವು ಹಾಗೂ ಅವು ಅಮೆರಿಕದ ವೇದಾಂತ ಸಂಚಲನದ ಆರಂಭದ ದಿನಗಳ ಶ್ರೀಮಂತ ಆಧ್ಯಾತ್ಮಿಕ ಪರಂಪರೆಯನ್ನು ಕುರಿತು ಗಾಢವಾಗಿ ಪರಿಭಾವಿಸುವಂತೆ ಮಾಡಿದವು.

ಯಾರ ಶಕ್ತಿಶಾಲಿ ಜೀವನವು ಅವರೊಂದಿಗೆ ವಾಸಿಸುತ್ತಿದ್ದ ಸೋದರಿಯರಿಗೆ ಆದರ್ಶಪ್ರಾಯವಾಗಿತ್ತೋ, ಆ ಸಂತ ಮಹಿಳೆಯನ್ನು ಕುರಿತ ಕೆಲವು ವೃತ್ತಾಂತಗಳನ್ನು ನಿಮ್ಮೊಡನೆ ಹಂಚಿಕೊಳ್ಳಬಯಸುತ್ತೇನೆ. ಆ ಸಹೋದರಿಯರ ಪಾಲಿಗೆ ಸೋದರಿ ಲಲಿತಾ ಸ್ವಾಮಿ ವಿವೇಕಾನಂದರ ಶಿಷ್ಯೆಯರಲ್ಲೊಬ್ಬಳು ಮಾತ್ರವಲ್ಲ, ಸ್ವಾಮಿ ಪ್ರಭವಾನಂದರನ್ನು ೧೯೪೬ರಲ್ಲಿ ಇವಾರ್ ಅವೆನ್ಯೂನ ತನ್ನ ಮನೆಯಲ್ಲಿ ವೇದಾಂತ ಕೇಂದ್ರವನ್ನು ತೆರೆಯುವಂತೆ ಆಮಂತ್ರಿಸುವುದರ ಮೂಲಕ ಲಾಸ್ ಎಂಜಲೀಸ್‌ನಲ್ಲಿ ವೇದಾಂತ ಕಾರ್ಯವು ನೆಲೆಯೂರುವಂತೆ ಮಾಡಿದ ಆದ್ಯ ಮಹಿಳೆ ಕೂಡ. ಆದ್ದರಿಂದ ಈಕೆಯ ಕಥೆಯು ಅಮೆರಿಕದ ವೇದಾಂತ ಆಂದೋಲನದ ಪ್ರಾರಂಭಿಕ ಇತಿಹಾಸದಲ್ಲಿ ಒಂದು ಮಹತ್ವಪೂರ್ಣ ಸಂಗತಿಯೇ ಸರಿ.

**ಹೂವುಗಳ ಕಿನ್ನರಲೋಕ:** ಸೋದರಿ ಲಲಿತಾ ಅಥವಾ ಶ್ರೀಮತಿ ಕ್ಯಾರಿ ವೈಕಾಫ್ ಬದುಕಿದ್ದು ೧೮೫೮ ರಿಂದ ೧೯೪೯ ರವರೆಗೆ. ೧೮೯೯–೧೯೦೦ರ ಅವಧಿಯಲ್ಲಿ ಸ್ವಾಮಿ ವಿವೇಕಾನಂದರು ಎರಡನೆಯ ಬಾರಿ ಪಾಶ್ಚಾತ್ಯ ರಾಷ್ಟ್ರಗಳ ಪ್ರವಾಸ ಮಾಡಿದರು. ಆಗ ದಕ್ಷಿಣ ಪಸಾಡೆನದಲ್ಲಿ ಈಗ ‘ವಿವೇಕಾನಂದ ಹೌಸ್’ ಎಂದು ಕರೆಯಲ್ಪಡುವ ಬಾಡಿಗೆಯ ಮನೆಯಲ್ಲಿದ್ದರು. ಆಗ ಅವರ ಆತಿಥೇಯರಾಗಿದ್ದ ಮೂವರು ಮೀಡ್ ಸೋದರಿಯರಲ್ಲಿ ಒಬ್ಬರು ಶ್ರೀಮತಿ ಕ್ಯಾರಿ ವೈಕಾಫ್ ಅಥವಾ ಸೋದರಿ ಲಲಿತಾ. ಸ್ವಾಮಿ ತುರೀಯಾನಂದರು ೧೯೦೦ ರ ಬೇಸಿಗೆಯಲ್ಲಿ ಎರಡು ವಾರಗಳ ಕಾಲ ಮೀಡ್ ಸೋದರಿಯರಲ್ಲಿಗೆ ಭೇಟಿಯಿತ್ತಾಗ, ಪಸಾಡೆನದ ಮನೆಯ ಗುಲಾಬಿ ಹೂದೋಟದಲ್ಲಿ, ಈಕೆಗೆ ಮಂತ್ರೋಪದೇಶವನ್ನು ಮಾಡಿದರು. ಬಳಿಕ ಸ್ವಾಮಿ ತ್ರಿಗುಣಾತೀತಾನಂದರು, ಅವರಿಗೆ ‘ಸೋದರಿ ಲಲಿತಾ’ ಎಂಬ ಹೆಸರನ್ನು ನೀಡಿದರು. ಆದರೆ, ಪ್ರವ್ರಾಜಿಕಾ ಪ್ರಭಾಪ್ರಾಣಾ ಅವರು ವಿವರಿಸುವಂತೆ, ಯಾರು ಅವರನ್ನು ಅನಂತರದ ವರ್ಷಗಳಲ್ಲಿ ಭೇಟಿಯಾದರೂ, ಅವರಿಗೆ ಆಕೆ ಕೇವಲ ‘ಸೋದರಿ’ ಅಥವಾ ‘Sister’ ಆಗಿದ್ದರು.

‘ಸೋದರಿ’ ಎನ್ನುವ ಆ ವಾತ್ಸಲ್ಯದ ಶಬ್ದವು, ಸೋದರಿ ಲಲಿತಾರ ಹಿರಿಮೆಯನ್ನೂ, ಅವರ ಅಕೃತ್ರಿಮ ಸ್ವಭಾವ ಮತ್ತು ಸಹಜ ವಿನಯಶೀಲ ವ್ಯಕ್ತಿತ್ವವನ್ನೂ ಚೆನ್ನಾಗಿ ಸೆರೆಹಿಡಿಯುತ್ತದೆ. ಅವರು ಶ್ರೀರಾಮಕೃಷ್ಣರ ಮೂವರು ನೇರ ಶಿಷ್ಯರೊಂದಿಗೆ ಸಾಕಷ್ಟು ಸಂಪರ್ಕ ಇರಿಸಿಕೊಂಡಿದ್ದರು; ತಮ್ಮ ಮನೆಯನ್ನು ಡಿಸೆಂಬರ್, ೧೯೨೯ರಂದು ಸ್ವಾಮಿ ಪ್ರಭವಾನಂದರಿಗೆ ಬಿಟ್ಟುಕೊಟ್ಟರು ಹಾಗೂ ಹಾಲಿವುಡ್‌ನ ದೇವಸ್ಥಾನವನ್ನು ಕಟ್ಟಲು ಅಗತ್ಯವಿದ್ದ ೧೨,೦೦೦ ಡಾಲರ್‌ಗಳಲ್ಲಿ ೧೦,೦೦೦ ಡಾಲರುಗಳನ್ನು ದಾನ ಮಾಡಿದರು. ಹೀಗಿದ್ದಾಗ್ಯೂ ಎಂದಿಗೂ ತಮ್ಮನ್ನು ತಾವು ಎಲ್ಲೂ ಪ್ರದರ್ಶಿಸಿಕೊಳ್ಳಲಿಲ್ಲ. ೧೯೪೧ರ ಬೇಸಿಗೆಯಲ್ಲಿ ಪ್ರವ್ರಾಜಿಕಾ ಪ್ರಭಾಪ್ರಾಣಾರವರು ಪ್ರಥಮ ಬಾರಿಗೆ ಹಾಲಿವುಡ್ ಕೇಂದ್ರಕ್ಕೆ ಬಂದಾಗ ಅವರು ಮೊದಲು ಕಂಡದ್ದು, ಬಿಳಿಗೂದಲಿನ ಓರ್ವ ಹಿರಿಯ ಮಹಿಳೆ ಬಾಗಿಕೊಂಡು, ಗಿಡಗಳ ಕಳೆಗಳನ್ನು ಕೀಳುತ್ತ, ಅವುಗಳನ್ನು ನೋಡಿಕೊಳ್ಳುತ್ತಿರುವ ದೃಶ್ಯ. ಶಾಂತ, ಉದ್ಯಮಶಾಲಿ, ನಿರಹಂಕಾರಿ – ಇವೇ ಸೋದರಿ ಲಲಿತಾರನ್ನು ಗುರುತಿಸಬಹುದಾದ ಕೆಲವು ಶಬ್ದಗಳು.





ಅವರಿಗೆ ತೋಟಗಾರಿಕೆ ಬರಿಯ ಹವ್ಯಾಸವಾಗಿರಲಿಲ್ಲ. ಅದು ಅವರ ಪಾಲಿಗೆ ಪೂಜೆಯೇ ಆಗಿತ್ತು. ಗುಲಾಬಿ ಹೂವುಗಳೆಂದರೆ ಅವರಿಗೆ ಅತ್ಯಂತ ಪ್ರಿಯ. ಅವಕ್ಕೆ ಪ್ರತ್ಯೇಕವಾಗಿ ನೀರು ಹಾಕುವಂತೆ ಒತ್ತಾಯಿಸುತ್ತಿದ್ದರು. ತಮ್ಮ ೮೦ರ ವಯಸ್ಸಿನಲ್ಲೂ ದೇವಮಂದಿರದ ದಿನನಿತ್ಯದ ಪೂಜೆಗೆ ಹೂವುಗಳು ಯಾವಾಗಲೂ ಸಿಗಲೆಂಬ ಉದ್ದೇಶದಿಂದ, ತೋಟವನ್ನು ತಾವೇ ಖುದ್ದಾಗಿ ನೋಡಿಕೊಳ್ಳುತ್ತಿದ್ದರು. ಜ್ಞಾನದಾ (ಆ್ಯನಿ ಲೊವೆನ್‌ಕಾಫ್) ಆಗ ವೇದಾಂತ ಕೇಂದ್ರದಲ್ಲಿದ್ದವರು, ಹೀಗೆ ನೆನಪಿಸಿಕೊಳ್ಳುತ್ತಾರೆ: “ಸೋದರಿ ಲಲಿತಾರ ಸೇವೆ ಮಾಡುವುದು ಸಂತೋಷದ ಅನುಭವ ಎನಿಸುತ್ತಿತ್ತು ಮತ್ತು ಅವರೊಂದಿಗಿರುವುದೇ ಒಂದು ಆನಂದವಾಗಿತ್ತು. ಅವರು ‘ಹೂವುಗಳ ಸುಂದರ ಕಿನ್ನರಲೋಕವನ್ನು ನಿರ್ಮಾಣಮಾಡೋಣ’ ಎಂದು ಹೇಳುವಾಗ ಅವರ ಮುಖದಲ್ಲಿ ಕಂಡುಬರುತ್ತಿದ್ದ ಆನಂದವನ್ನು ನಿಮಗೆ ವಿವರಿಸಬೇಕೆನಿಸುತ್ತದೆ. ಅವರು ತಮ್ಮ ಆನಂದವನ್ನು ನನ್ನಲ್ಲಿ ತುಂಬಿದರು. ಅದು ಇಂದಿನವರೆಗೂ ನನ್ನೊಂದಿಗಿದೆ.”

ತಮ್ಮ ಗುರು ಸ್ವಾಮಿ ಬ್ರಹ್ಮಾನಂದಜಿಯವರು ಹೇಳಿದ ರೀತಿಯಲ್ಲಿಯೇ, ಸ್ವಾಮಿ ಪ್ರಭವಾನಂದರೂ ಮಠದಲ್ಲಿದ್ದ ತಮ್ಮ ಜೊತೆಯವರಿಗೆ, ಪ್ರತಿದಿನ ಒಂದು ಗಂಟೆಯಾದರೂ ತೋಟದಲ್ಲಿ ಕೆಲಸ ಮಾಡುವಂತೆ ಹೇಳುತ್ತಿದ್ದರು. ಮಣ್ಣಿನಲ್ಲಿ ಕೆಲಸ ಮಾಡುವುದರಿಂದ ಪ್ರಾಮಾಣಿಕತೆ ಮತ್ತು ಸರಳತೆಗಳನ್ನು ಮೈಗೂಡಿಸಿಕೊಳ್ಳಬಹುದು ಎಂಬುದು ಅವರ ಅಭಿಪ್ರಾಯ. ಈ ಗುಣಗಳು ಸೋದರಿಯ ವ್ಯಕ್ತಿತ್ವದಲ್ಲಿ ಮನೆಮಾಡಿದ್ದವು. “ಪವಿತ್ರವಾಗಿರು, ಸತ್ಯನಿಷ್ಠಳಾಗಿರು, ಬಲಿಷ್ಠಳಾಗಿರು” ಎಂಬ ಸಂದೇಶವನ್ನು ಅವರು ಸ್ವಾಮಿ ವಿವೇಕಾನಂದರಿಂದ ಹಾಗೂ ಅವರ ಸಂನ್ಯಾಸಿ ಸೋದರರಿಂದ ಪಡೆದಿದ್ದರು ಹಾಗೂ ಅದಕ್ಕನುಗುಣವಾಗಿ ಬದುಕಿದರು.

“ಸತ್ಯನಿಷ್ಠೆಯೇ ಪವಿತ್ರತೆ ಮತ್ತು ಪವಿತ್ರತೆಯೇ ಬಲ; ಸತ್ಯವಚನಪಾಲನೆ ಈ ಯುಗದ ತಪಸ್ಸು” ಎಂದು ಶ್ರೀರಾಮಕೃಷ್ಣರು ಹೇಳುತ್ತಿದ್ದರು. ಉತ್ಪ್ರೇಕ್ಷೆಯಿಲ್ಲದೆ, ಪ್ರದರ್ಶನವಿಲ್ಲದೆ, ಇತರರಿಗೆ ನೋವನ್ನುಂಟುಮಾಡದೆ ಸತ್ಯವನ್ನು ಹೇಳುವುದು ವ್ಯಕ್ತಿಯ ಅನಹಂಕಾರ ಮತ್ತು ಮಾನಸಿಕ ಸಮತ್ವವನ್ನು ತೋರಿಸುತ್ತದೆ. ಸೋದರಿ ಲಲಿತಾ ಯಾವಾಗಲೂ ಶ್ರೀರಾಮಕೃಷ್ಣರ “ಸತ್ಯವಚನ ಮುಖ್ಯ, ಆದರೆ ಕಠೋರ ವಚನವಲ್ಲ” ಎಂಬ ಉಪದೇಶಕ್ಕೆ ಅಂಟಿಕೊಂಡಿದ್ದರು.

**ಸಣ್ಣ ಕೆಲಸಗಳಲ್ಲಿ ಹಿರಿಮೆ:** ಸ್ವಾಮಿ ವಿವೇಕಾನಂದರು ಒಮ್ಮೆ ಹೇಳುತ್ತಾರೆ, “ನಾನು ದೊಡ್ಡವನಾದಷ್ಟೂ, ಸಣ್ಣ ಸಣ್ಣ ವಿಷಯಗಳಲ್ಲಿ ಮಹಿಮೆಯನ್ನು ಕಾಣಬಯಸುತ್ತೇನೆ. ಮಹಾತ್ಮನಾದವನು ಏನನ್ನು ತಿನ್ನುತ್ತಾನೆ, ಏನನ್ನು ಧರಿಸುತ್ತಾನೆ ಮತ್ತು ತನ್ನ ಸೇವಕರೊಂದಿಗೆ ಹೇಗೆ ಮಾತನಾಡುತ್ತಾನೆ ಎಂಬುದನ್ನು ನಾನು ತಿಳಿಯಬಯಸುತ್ತೇನೆ.” ಈ ಅರ್ಥದಲ್ಲಿ ಸೋದರಿ ಲಲಿತಾರ ಮಹಿಮೆ ಉಜ್ವಲವಾಗಿತ್ತು. ಸ್ವಾಮಿ ತುರೀಯಾನಂದರು ಒಮ್ಮೆ ಅವರಿಗೆ ಹೇಳಿದರು, “ನೀನು ಮಾಡಬೇಕಾದ ಕೆಲಸವೊಂದಿದೆ. ಆದರದು ಸದ್ದಿಲ್ಲದ, ಮೌನ ಕಾರ್ಯ.” ಒಬ್ಬ ಭಕ್ತ, ಸೋದರಿ ಲಲಿತಾರ ಬಗ್ಗೆ ಹೀಗೆ ಹೇಳುತ್ತಾರೆ: “ನೀವು ಸೋದರಿ ಲಲಿತಾರವರನ್ನು ಅವರು ಎಲ್ಲಿದ್ದಾರೆಂದು ಹುಡುಕಬೇಕು. ಅವರನ್ನು ಗಮನಿಸದೆ, ಬೇರೆ ಕೆಲಸಕಾರ್ಯಗಳಾಗುವೆಡೆ ನೀವು ಸುಲಭವಾಗಿ ಹೋಗಿಬಿಡುತ್ತೀರಿ. ಅದಕ್ಕೆ ಬದಲಾಗಿ, ನೀವು ಅವರ ಹತ್ತಿರ ಹೋಗಿ, ಅವರನ್ನು ಅರ್ಥ ಮಾಡಿಕೊಳ್ಳಬಯಸಿದರೆ, ಅವರಿಗಾಗಿ ನೀವು ಮಾಡಿಕೊಡುವಂತಹ ಸಣ್ಣ ಕೆಲಸವೂ ನಿಮಗೆ ಲಾಭವೇ ಆಗುತ್ತಿತ್ತು. ಅದನ್ನು ಹೇಗೆ ವಿವರಿಸುವುದೆಂದು ನನಗೆ ಗೊತ್ತಿಲ್ಲ. ಆದರೆ, ಆ ಸೋದರಿಗಾಗಿ ನೀವು ಏನನ್ನು ಮಾಡಿದರೂ, ಅದರ ಮೂಲಕ ನಿಮಗೆ ಒಳಿತಿನ ಅನುಭವವೇ ಆಗುತ್ತಿತ್ತು.”

ನಮ್ಮಲ್ಲೆಷ್ಟು ಜನ ತಮ್ಮಿಂದ ಇತರರಲ್ಲಿ ಒಳಿತಿನ ಭಾವನೆಯನ್ನು ಮತ್ತು ಧನ್ಯತೆಯನ್ನು ಉಂಟುಮಾಡಬಲ್ಲೆವು? ಆದರೆ, ಸೋದರಿ ಲಲಿತಾ ಹಾಗೆ ಮಾಡಬಲ್ಲವರಾಗಿದ್ದರು. ಅದು ಅವರಲ್ಲಿದ್ದ ಅಪೂರ್ವ ಶಕ್ತಿಯಾಗಿತ್ತು. ಅವರು ಒಳಿತನ್ನು, ಬಲವನ್ನು ತಮ್ಮ ಸುತ್ತಲಿರುವವರಿಗೆ ಹಂಚಬಲ್ಲವರಾಗಿದ್ದರು. “ ‘ಸೋದರಿ’ ಯೊಂದಿಗೆ ವಾಸಿಸುವುದೆಂದರೆ ಅದು ಹೇಗಿತ್ತು?” ಎಂದು ನಾನು ಜ್ಞಾನದಾರವರನ್ನು ಕೇಳಿದೆ. ಅದಕ್ಕೆ ಜ್ಞಾನದಾ ಬರೆದಿದ್ದಾರೆ: “ನಾನು ಪ್ರತಿದಿನ ಬೆಳಿಗ್ಗೆ ಅವರಿಗೆ ಟೀಯನ್ನು ಕೊಡುತ್ತಿದ್ದೆ. ನಾನು ಅದನ್ನು ಕೊಡಲು ತಡವಾದಾಗಲೂ ಒಂದು ಚೂರೂ ಗೊಣಗಾಟವಿಲ್ಲ. ಬದಲಾಗಿ ಇಡೀ ದಿನದೆಡೆಗೆ ಅವರ ಉತ್ಸಾಹಪೂರ್ಣ ಗಮನವಿದ್ದಿತು. ನಾನು ಅವರೊಂದಿಗಿದ್ದಾಗ, ನನ್ನಲ್ಲಿ ಹಲವಾರು ದೋಷಗಳಿದ್ದರೂ, ಅವರು ಒಂದು ದಿನವೂ ನನ್ನನ್ನು ಬೈಯಲಿಲ್ಲ. ಅವರಿಂದ ಬೈಸಿಕೊಂಡಿರುವುದಾಗಿ ಹೇಳಿದ ಒಬ್ಬರನ್ನೂ ನಾನು ನೋಡಲಿಲ್ಲ. ಕೆಲವು ವಿಷಯಗಳನ್ನು ಅವರು ಒಪ್ಪುತ್ತಿರಲಿಲ್ಲ. ವೇದಾಂತ ಕೇಂದ್ರದ ಒಬ್ಬ ದೋಷಿ ಸದಸ್ಯನ ಕುರಿತು ಮಾತನಾಡುವಾಗ, ಅವರ ಧ್ವನಿಯಲ್ಲಿ ಉದ್ವೇಗವಿರುತ್ತಿತ್ತು. ಆದರೆ, ಪರದೂಷಣೆ, ಹರಟೆಗಳು ಅವರಿಗೆ ಗೊತ್ತೇ ಇರಲಿಲ್ಲ ಎಂದು ಹೇಳಬಹುದು.”

ಜ್ಞಾನದಾ ಮತ್ತೂ ಹೀಗೆ ಬರೆಯುತ್ತಾರೆ: “ನಾನು ಅವರೊಂದಿಗಿದ್ದಾಗ, ಅವರಲ್ಲಿ ಏನನ್ನು ಕಂಡೆನೋ, ಅದನ್ನು ಬಿಟ್ಟರೆ, ಅವರ ಆಧ್ಯಾತ್ಮಿಕ ಜೀವನದ ಬಗ್ಗೆ ನನಗೆ ಏನೂ ಗೊತ್ತಿಲ್ಲ. ಅವರು ಶಬ್ದಗಳಿಂದ ಅಲ್ಲ, ತಮ್ಮ ಪ್ರೇಮ ಮತ್ತು ದಿವ್ಯ ಸಾನ್ನಿಧ್ಯಗಳಿಂದಲೇ ನನ್ನನ್ನು ಆಶೀರ್ವದಿಸಿದರು. ಅದೇ ಇಂದಿಗೂ ನನ್ನನ್ನು ಕಾಪಾಡಿದೆ.” ಈ ಮಾತುಗಳನ್ನು ಬರೆಯುವಾಗ ಜ್ಞಾನದಾ ಕಂಬನಿಗರೆಯುತ್ತಿದ್ದರು.